ಬಚಾವತ್ ವರದಿ ಪ್ರಕಾರ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳು

292 (538) ಶ್ರೀ ಮತಿ ಬಿ.ಟಿ.ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ''ಬಚಾವತ್'' ವರದಿಯ ಪ್ರಕಾರ ಕೃಷ್ಣಾ ಬಲದಂಡೆ ಯೋಜನೆಯ ಕಾಮಗಾರಿಗಳನ್ನು 2000 ಇಸವಿಯೊಳಗಾಗಿ ಮುಗಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಗಾಗಿ ತೊಡಗಿಸಲಾದ ಹಣ ಎಷ್ಟು ?

ಇ) ''ಕೃಷ್ಣಾ ಭಾಗ್ಯ ಜಲ ನಿಗಮ''ದ ವೃತ್ತ ಕಛೇರಿಯು ದೇವದುರ್ಗದ ಅಮರಾಪುರ ದಲ್ಲಿ ನಿರ್ಮಿಸಲು ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ''ಎ'' ಸ್ಕೀಮ್ ಅಡಿಯಲ್ಲಿ ಇನ್ನು ಎಷ್ಟು ಕಾಮಗಾರಿ ನಡೆಯಬೇಕಾಗಿದೆ; ಆ ಯೋಜನೆಯನ್ನು ಎಂದುಪೂರ್ಣಗೊಳಿಸಲಾಗುವುದು;

ಉ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಗಮನದಲ್ಲಿದೆ.

ಆ) ನಾರಾಯಣಪುರ ಬಲದಂಡೆ ಕಾಲುವೆಗೆ ಜನವರಿ 1999ರ ವರೆಗೆ ರೂ. 284.67 ಕೋಟಿ ಗಳನ್ನು ವೆಚ್ಚಮಾಡಲಾಗಿದೆ.

ಇ) ಬಂದಿದೆ

ಈ) ಸ್ಕೀಮ್ ''ಎ'' ಅಡಿಯಲ್ಲಿ ನಾರಾಯಣಪೂರ ಬಲದಂಡೆ ಕಾಲುವೆ 0 ರಿಂದ 95 ಕಿ.ಮೀ. ವರೆಗಿನ ಕಾಮಗಾರಿಯನ್ನು ಪೂರ್ಣಗೊಳಿಸ ಬೇಕಾಗಿದೆ. ಇದರಲ್ಲಿ ಕಿ.ಮೀ 0 ರಿಂದ 70ರವರೆಗಿನ ಕಾಮಗಾರಿಗಳನ್ನು ನೇರಗುತ್ತಿಗೆಯ ಆಧಾರದ ಮೇರೆ ವಹಿಸಿಕೊಡಲಾಗಿದ್ದು (ಕಾಯ್ದಿಟ್ಟ ಅರಣ್ಯ ಪ್ರದೇಶ ಕಿ.ಮೀ.28.00ರಿಂದ 31.00 ಹೊರತಾಗಿ ಇದಕ್ಕಾಗಿ ಟೆಂಡರುಗಳು ಇತ್ಯರ್ಥಗೊಳ್ಳುವ ಹಂತದಲ್ಲಿದೆ) ಇವು ಪೂರ್ಣಗೊಳ್ಳುವ ಹಂತದಲ್ಲಿವೆ. ನಾರಾಯಣಪೂರ ಬಲದಂಡೆ ಕಾಲುವೆ ಕಿ.ಮೀ. 70 ರಿಂದ 85 ರವರೆಗಿನ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಈಗಾಗಲೇ ವಹಿಸಿಕೊಡಲಾಗಿದ್ದು ಕೆಲಸಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ನಾರಾಯಣಪೂರ ಬಲದಂಡೆ ಕಾಲುವೆ ಕಿ.ಮೀ.86 ರಿಂದ 95ರವರೆಗಿನ ಕಾಮಗಾರಿಗಳಿಗೆ ಅಂದಾಜುಗಳನ್ನು ತಯಾರಿಸಲಾಗಿದ್ದು, ಪ್ಯಾಕೇಜ್ ಆಧಾರದ ಮೇಲೆ ಟೆಂಡರ್‌ಗಳನ್ನು ಏಪ್ರಿಲ್ 99ರೊಳಗೆ ಕರೆಯಲಾಗುವುದು. ಎಲ್ಲಾ ಕಾಮಗಾರಿಗಳನ್ನು 2000 ಇಸವಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಸದರಿ ಕಾಲುವೆಯ 86ರಿಂದ95 ಕಿ.ಮೀ ವರೆಗಿನ ಕಾಮಗಾರಿಗಳಿಗೆ ಏಪ್ರಿಲ್ 99ರಲ್ಲಿ ಟೆಂಡರ್ ಕರೆದು ಪ್ರಾರಂಭಿಸಲಾಗುವುದು.

ಕೊಡಗು ಜಿಲ್ಲೆಯಲ್ಲಿ ನಡೆದ ಕೊಲೆ, ದರೋಡೆ ಪ್ರಕರಣಗಳು

294 (613) ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದಿರುವ ಕೊಲೆ, ದರೋಡೆ ಪ್ರಕರಣಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ)ಕೊಡಗು ಮನೆಗಳ್ಳತನದಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು)

ಅ)ಕಳೆದ ಎರಡು ವರ್ಷಗಳಲ್ಲಿ ಹಾಗೂ ಪ್ರಸ್ತುತ ವರ್ಷದಲ್ಲಿ 28-2-99 ಕೊಡಗು ಜಿಲ್ಲೆಯಲ್ಲಿ ನಡೆದಿರುವಕೊಲೆ ದರೋಡೆ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ವರ್ಷ	ತಾಲ್ಲೂಕು	ದಾಖಲಾದ ಕೊಲೆ ಪ್ರಕರಣಗಳು	ದಾಖಲಾದ ದರೋಡೆ ಪ್ರಕರಣಗಳು
1997	ಮಡಿಕೇರಿ	11	2
	ಸೋಮವಾರಪೇಟೆ	10	3
	ವಿರಾಜಪೇಟೆ	26	3
1998	ಮಡಿಕೇರಿ	9	2
	ಸೋಮವಾರಪೇಟೆ	8	1
	ವಿರಾಜಪೇಟೆ	16	1
1999	ಮಡಿಕೇರಿ	2	-
	ಸೋಮವಾರಪೇಟೆ	1	-
	ವಿರಾಜಪೇಟೆ	2	-

ಆ)ಕಳೆದ ಎರಡು ವರ್ಷಗಳಲ್ಲಿ ಹಾಗೂ ಪ್ರಸ್ತುತ (28-2-99ರವರೆಗೆ)ವರದಿಯಾದ ಮತ್ತು ಪತ್ತೆಯಾದ ಮನೆಗಳ್ಳತನಗಳು (ಹಗಲು ಮತ್ತುರಾತ್ರಿ)ಈ ಕೆಳಕಂಡಂತಿರುತ್ತದೆ.

ವರ್ಷ	ತಾಲ್ಲೂಕು	ಹಗಲು ಮತ್ತುರಾತ್ರಿ ಗಳ್ಳತನಗಳ ವಿವರ ವರದಿ	ಮನೆ ಪತ್ತೆ
1997	ಮಡಿಕೇರಿ	47	16
	ಸೋಮವಾರಪೇಟೆ	59	19
	ವಿರಾಜಪೇಟೆ	68	21
1998	ಮಡಿಕೇರಿ	58	9
	ಸೋಮವಾರಪೇಟೆ	59	25
	ವಿರಾಜಪೇಟೆ	53	18
1999	ಮಡಿಕೇರಿ	9	-
	ಸೋಮವಾರಪೇಟೆ	8	1
	ವಿರಾಜಪೇಟೆ	9	1